**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 558/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ರುದ್ರಪ್ಪ ತಂದೆ ಹನುಮಂತ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ವಂದಲಿ |
| ಪ್ರಮಾಣಿಕರಿಸಿದ ದಿನಾಂಕ | : | 02-05-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಆರೋಪಿ ನನ್ನ ಮಗ. ಚಾಸಾ-2 ರಿಂದ 5 ರವರ ಪರಿಚಯ ಇದೆ. ನನಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನಗೆ ಒಬ್ಬ ಚಿಕ್ಕ ಸಹೋದರ ಇರುತ್ತಾರೆ. ನನ್ನ ಸಹೋದರ ಮಾನಸಿಕ ಕಾಯಿಲೆಗೆ ಒಳಗಾಗಿರುತ್ತಾರೆ. ನನ್ನ ಸಹೋದರನನ್ನು ಅವರ ಹೆಂಡತಿ ಬಿಟ್ಟು ಹೋಗಿದ್ದು ನಾನೇ ನನ್ನ ಸಹೋದರನನ್ನು ಜೋಪಾನ ಮಾಡುತ್ತಿದ್ದೇನೆ. 20 ಎಕರೆ ಜಮೀನಿನಲ್ಲಿ ನನಗೆ ಹಾಗೂ ನನ್ನ ಸಹೋದರನಿಗೆ ತಲಾ 10 ಎಕರೆ ಜಮೀನು ಇರುತ್ತದೆ.

ನನ್ನ ಭಾಗಕ್ಕೆ ಇರುವ 10 ಎಕರೆ ಜಮೀನಿನಲ್ಲಿ ತಲಾ 5 ಎಕರೆ ಜಮೀನನ್ನು ಆರೋಪಿಗೆ ಹಾಗೂ ನನ್ನ ಇನ್ನೊಬ್ಬ ಮಗನಿಗೆ ಕೊಟ್ಟಿರುತ್ತೇನೆ. ನಾನು ನನ್ನ ಮಕ್ಕಳ ಮದುವೆಯನ್ನು ಮಾಡಿದ್ದು ನಂತರ ನನ್ನ ಇಬ್ಬರು ಗಂಡು ಮಕ್ಕಳು ನನ್ನನ್ನು ಬಿಟ್ಟು ಬೇರೆ ಬೇರೆ ಆಗಿರುತ್ತಾರೆ. ಸುಮಾರು ಒಂದು ವರ್ಷದ ಹಿಂದೆ ನಾನು ರಾತ್ರಿ ಊಟ ಮಾಡಿ ಮನೆಯ ಕಟ್ಟೆಯ ಮೇಲೆ ಕುಳಿತಿದ್ದಾಗ ಆರೋಪಿ ನಮ್ಮ ಮನೆಯಲ್ಲಿ ಕಟ್ಟಿ ಹಾಕಿದ್ದ ನಮ್ಮ ನಾಯಿಗೆ ಕಲ್ಲಿನಿಂದ ಹೊಡೆದಿರುತ್ತಾರೆ. ಈ ಬಗ್ಗೆ ನಾನು ಆರೋಪಿಯನ್ನು ವಿಚಾರಿಸಿದಾಗ ಆರೋಪಿ ನನ್ನ ಕುತ್ತಿಗೆ ಹಿಡಿದು ಹೊಡೆದಿರುತ್ತಾರೆ. ಆಗ ಅಲ್ಲಿದ್ದ ಇಬ್ಬರು ಜನ ನನ್ನನ್ನು ಆರೋಪಿಯಿಂದ ಬಿಡಿಸಿರುತ್ತಾರೆ. ನಂತರ ಮರುದಿನ ಬೆಳಿಗ್ಗೆ 6-30 ಗಂಟೆಗೆ ಆರೋಪಿ ಬಡಿಗೆ ತೆಗೆದುಕೊಂಡು ನಮ್ಮ ಮನೆಗೆ ಬಂದು ಬಡಿಗೆಯಿಂದ ನನ್ನ ಕೈಗೆ ಹಾಗೂ ತಲೆಗೆ ಹೊಡೆದಿರುತ್ತಾನೆ ಇದರಿಂದ ನನ್ನ ಎಡ ಮುಂಗೈಯಲ್ಲಿ ಮೂಳೆ ಮುರಿತ ಆಗಿ ತಲೆಯಿಂದ ರಕ್ತಸ್ರಾವ ಆಗಿರುತ್ತದೆ. ನಂತರ ಪೊಲೀಸ ಠಾಣೆಗೆ ಹೋಗಿ ಅಲ್ಲಿ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಅನಂತರ ಜಾಲಹಳ್ಳಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದು ಅಲ್ಲಿಂದ ರಾಯಚೂರು ರಿಮ್ಸ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ.

ಮುದ್ದೆಮಾಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.